ಈ) ಹೌದು. ಕಾರ್ಖಾನೆಯು ನಷ್ಟದಲ್ಲಿ ನಡೆಯುತ್ತಿದೆ. ದಿನಾಂಕ 31-3-2002ರಲ್ಲಿದ್ದಂತೆ ಕಾರ್ಖಾನೆಯ ಒಟ್ಟು ಕ್ರೋಢೀಕೃತ ನಷ್ಟ ರೂ. 33.00 ಕೋಟಿ. ಕಾರ್ಖಾನೆಯು ಕ್ರೋಢೀಕೃತ ನಷ್ಟವನ್ನು, ನಿಭಾಯಿಸಲು ಕೇಂದ್ರ ಸರ್ಕಾರದ ಕಬ್ಬು ಅಭಿವೃದ್ಧಿ ನಿಧಿಯಿಂದ ರೂ. 3.00 ಕೋಟಿ ಸಾಲದ ಪ್ರಸ್ತಾವನೆ ಸಲ್ಲಿಸಿದ್ದು, ಇದರಿಂದ ಕಬ್ಬು ಅರೆಯುವಿಕೆಯ ಸಾಮರ್ಥ್ಯಕ್ಕೆ ಬೇಕಾದಷ್ಟು ಕಬ್ಬನ್ನು ಬೆಳೆಯಲು ಯೋಜನೆ ಹಾಕಿಕೊಂಡಿದೆ. ಇದರಿಂದ, ಪೂರ್ಣ ಸಾಮರ್ಥ್ಯದಲ್ಲಿ ಕಬ್ಬು ನುರಿಸುವಂತಾಗಿ ನಷ್ಟವನ್ನು ಕಡಿಮೆ ಮಾಡಬಹುದಾಗಿದೆ. ಅದೇ ರೀತಿ ಬಹುದಿನಗಳ ಯೋಜನೆಯಾದ ವರಾಹಿ ಯೋಜನೆಯು ಮುಂದಿನ 2-3 ವರ್ಷಗಳಲ್ಲಿ ಅನುಷ್ಠಾನಗೊಳ್ಳುವ ಸೂಚನೆಗಳಿರುವುದರಿಂದ ಕಾರ್ಖಾನೆಗೆ ಕಬ್ಬಿನ ಲಭ್ಯತೆ ಪ್ರಮಾಣ ಹೆಚ್ಚಿ ಆರ್ಥಿಕ ಸ್ಥಿತಿಯು ಸುಧಾರಣೆಯಾಗಬಹುದೆಂದು ಭಾವಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಮತ್ಸ್ಯ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರಾತಿ

2096 (2523) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಿಂದ ಮೀನುಗಾರರ ಮನೆಗಳ ಮಂಜೂರಾತಿ ಕೋರಿ ಎಷ್ಟು ಅರ್ಜಿಗಳು ಇಲಾಖೆಗೆ ಬಂದಿವೆ;

ಆ) ಉಡುಪಿ ಜಿಲ್ಲೆಯ ಕುಂದಾಪುರ ವಿಧಾನಸಭಾ ಕ್ಷೇತ್ರದಿಂದ ಬಂದ ಅರ್ಜಿಗಳು ಎಷ್ಟು;

ಇ) ಮನೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದವರಿಗೆ ಸಮರೋಪಾದಿಯಲ್ಲಿ ಮನೆ ಮಂಜೂರು ಮಾಡುವ ಇರಾದೆ ಸರಕಾರಕ್ಕಿದೆಯೆ;

ಈ) 2003-04ನೇ ಸಾಲಿನಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಮನೆಗಳ ಬೇಡಿಕೆಗೆ ಅನುಗುಣವಾಗಿ ಹೆಚ್ಚಿನ ಮನೆಗಳನ್ನು ಮಂಜೂರು ಮಾಡಲಾಗುವುದೇ;

ಉ) 2003-2004ನೇ ಸಾಲಿನಲ್ಲಿ ಕರಾವಳಿ ಜಿಲ್ಲೆಯ ವಿಧಾನ ಸಭಾ ಕ್ಷೇತ್ರವಾರು ಮನೆಗಳ ಹಂಚಿಕೆಗಳಲ್ಲಿ ತಾರತಮ್ಯ ತೋರಿಸಲಾಗಿದೆಯೇ;

ಊ) ಹಾಗಿದ್ದಲ್ಲಿ ಕಾರಣವೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು): ಅ) ಉಡುಪಿ ಜಿಲ್ಲೆಯಿಂದ ಮೀನುಗಾರರ ಮನೆಗಳ ಮಂಜೂರಾತಿ ಕೋರಿ ಸುಮಾರು 4250 ಅರ್ಜಿಗಳು ಬಂದಿರುತ್ತವೆ.

ಆ) ಉಡುಪಿ ಜಿಲ್ಲೆಯ ಕುಂದಾಪುರ ವಿಧಾನಸಭಾ ಕ್ಷೇತ್ರದಿಂದ ಸುಮಾರು 500 ಅರ್ಜಿಗಳು ಬಂದಿವೆ.

ಇ) ಅನುದಾನ ಲಭ್ಯತೆ ಅನುಗುಣವಾಗಿ ಮನೆಗಳನ್ನು ಮಂಜೂರು ಮಾಡಲಾಗುವುದು.

ಈ) 2003-04ನೇ ಸಾಲಿನ ಅನುದಾನ ಲಭ್ಯತೆ ಹಾಗೂ ಮನೆಗಳ ಬೇಡಿಕೆಗಳ ಅನುಗುಣವಾಗಿ ಮನೆಗಳನ್ನು ಮಂಜೂರು ಮಾಡಲಾಗಿದೆ.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.